ಜೊತೆಗೆ ಸಮಾಲೋಚನೆ ನಡೆಸಿದ್ದೇವೆ. ಈ ಹಣವನ್ನು ಬಿಡುಗಡೆ ಮಾಡಬೇಕೆಂದು ನಾವು ಅವರನ್ನು ಕೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಇನ್ನೂ ಹೆಚ್ಚಿನ ಹಣವನ್ನು ಸಹಿತ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಈ ಶಾಲೆಯನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಲಿಕ್ಕೆ ಕಟಿ ಬದ್ದರಾಗಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇವತ್ತಿನ ದಿವಸ ಎಸ್.ಸಿ/ಎಸ್.ಟಿ ಸ್ಕೂಡೆಂಟ್ಸ್ ಕಡೆಯಿಂದ ಆ ಶಾಲೆಯವರು ಹನ್ನೊಂದು ನೂರು ರೂಪಾಯಿ ಕಲೆಕ್ಟ್ ಮಾಡುತ್ತಿದ್ದಾರೆ. ಈ ಶಾಲೆಯ ಆರ್ಥಿಕ ಪರಿಸ್ಥಿತಿ ಚಲೋ ಇಲ್ಲವೆಂದು ಹೇಳುತ್ತಿದ್ದಾರೆ. ಶಾಲೆ ನಡೆಸಲಿಕ್ಕೆ ಸಾಧ್ಯ ಇಲ್ಲ ಎನ್ನುವ ಉದ್ದೇಶದಿಂದ, ಮುಚ್ಚಬಾರದು ಎನ್ನುವ ಉದ್ದೇಶದಿಂದ ಪ್ರಿನ್ಸಿಪಾಲರು ನಿಮ್ಮ ಕಮಿಷನರ್ ಪರ್ಮಿಷನ್ ತೆಗೆದುಕೊಂಡು ಹನ್ನೊಂದು ನೂರು ರೂಪಾಯಿ ಎಸ್‌ಸಿ/ಎಸ್‌ಟಿ. ಕಡೆಯಿಂದ ಉಪಯೋಗ ಮಾಡಿದ್ದಾರೆ. 36 ರೂಪಾಯಿ ಬೇರೆ ಇತರ ಜೆನರಲ್ ಮೆರಿಟ್ ಕಡೆಯಿಂದ . ಆದಕಾರಣ, ಇದಕ್ಕೆ ತಾವು ಆ ರೊಕ್ಕ ಪೆರೆಂಟ್ಸ್‌ಗೆ ಮರು ಪಾವತಿ ಮಾಡುತ್ತೀರಾ ಹೇಗೆ ಮತ್ತು ಮಾಡಿದರೆ ಎಷ್ಟು ಅಮೌಂಟ್ ಕಲೆಕ್ಟ್ ಮಾಡಿದ್ದೀರಿ? ಮತ್ತು ಇನ್ನೊಂದು ತಮ್ಮ ಉತ್ತರದಲ್ಲಿ ಸಿಂಹ ಪಾಲು ರಾಜ್ಯ ಸರ್ಕಾರ ಭರಿಸುತ್ತದೆ ಎಂದು ಹೇಳಿದ್ದೀರಿ. ಸಿಂಹ ಪಾಲು ಎಂದರೆ ಎಷ್ಟು ಭರಿಸುತ್ತೀರಿ? ಅದರ ಸಲುವಾಗಿ ಈ ಶಾಲೆ ಮುಚ್ಚುವ ಸ್ಥಿತಿಯಲ್ಲಿ ಇದೆ. ಕುಡಿಯಲಿಕ್ಕೆ ನೀರು ಇಲ್ಲ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ. ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುವ ಪ್ರಯತ್ನ ಮಾಡುತ್ತೇವೆ . ಈಗಾಗಲೇ 41 ಲಕ್ಷ ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದೇವೆ. ಇನ್ನು 12 ಲಕ್ಷ ರೂಪಾಯಿ ಕೊಡುತ್ತೇವೆ. ಅವರು ಕೇಳಿದಷ್ಟು ಹಣ. ಅವರು ಕೇಳಿದ್ದು 53 ಲಕ್ಷ ಚಿಲ್ಲರೆ ಕೇಳಿದ್ದಾರೆ. ನಾವು ಅದನ್ನು ಸಹಿತ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ಏನು ಹೇಳುತ್ತಾ ಇದ್ದಾರೆ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು. ಅದು ನಮ್ಮ ಗಮನಕ್ಕೆ ಬಂದಿಲ್ಲ ಆದರೆ ಇವತ್ತೇ ನಾನು ಅದರ ಬಗ್ಗೆ ಒಂದು ವರದಿ ತರಿಸಿ ಕುಡಿಯುವ ನೀರಿನ ವ್ಯವಸ್ಥೆ, ಅಲ್ಲಿ ತೊಂದರೆ ಇದೆ ಎನ್ನುವುದನ್ನು ವಿಚಾರಿಸಿ, ಆ ವ್ಯವಸ್ಥೆ ಮಾಡಲಿಕ್ಕೆ ಬಹಳ ಪ್ರಯತ್ನ ಮಾಡುತ್ತೇನೆ.

<u>ವಿಷಯ : ರಾಣೆಬೆನ್ನೂರು ನಗರಕ್ಕೆ ಆಯುರ್ವೇದ ಆಸ್ಪತ್ರೆ.</u>

82

ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಣೆಬೆನ್ನೂರು ನಗರಕ್ಕೆ ಒಂದು ಆಯುರ್ವೇದ ದವಾಖಾನೆ ಮಂಜೂರಾಗಿದೆಯೇ? ಮತ್ತು ಹಾಗಿಲ್ಲದಿದ್ದರೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಇಲ್ಲಿಯವರೆಗೆ ಮಂಜೂರಾತಿ ಮಾಡಿದಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರಾಣಿಬೆನ್ನೂರು ನಗರಕ್ಕೆ ಇನ್ನೂ ಸರ್ಕಾರಿ ಆಯುರ್ವೇದ ಆಸ್ಪತ್ರೆ ಮಂಜೂರಾಗಿರುವುದಿಲ್ಲ. ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ತಾಲ್ಲೂಕು ಕೇಂದ್ರಗಳಲ್ಲಿ 6 ರಿಂದ 10 ಹಾಸಿಗೆಗಳ ಸರ್ಕಾರಿ ಆಯುರ್ವೇದ ಆಸ್ಪತ್ರೆ ತೆರೆಯುವ ಕಾರ್ಯಕ್ರಮವು ಜಿಲ್ಲಾ ಪರಿಷತ್ತಿನ ಯೋಜನೆಯಾದ ಕಾರಣ, ಸಂಬಂಧಿಸಿದ ಜಿಲ್ಲಾ ಪರಿಷತ್ ಇದೂವರೆವಿಗೂ ಇದಕ್ಕೆ ಬೇಕಾದ ಆಯವ್ಯಯವನ್ನು ಯೋಜನೆ ಅಡಿಯಲ್ಲಿ ನಿಗಧಿಪಡಿಸಿಕೊಂಡಿಲ್ಲ. ಹಾಗೂ ಸೂಕ್ತ ಪ್ರಸ್ತಾವನೆಯನ್ನು ನೀಡಿಲ್ಲದ ಕಾರಣ ಇಲ್ಲಿಯವರೆಗೆ ಮಂಜೂರಾತಿ ಮಾಡಲಾಗುವುದಿಲ್ಲ. ಆದರೆ 1993-94 ನೇ ಸಾಲಿನಲ್ಲಿ ಈ ಬಗ್ಗೆ ಬೇಕಾಗುವ ಅಗತ್ಯ ಆಯವ್ಯಯಗಳನ್ನು ಜಿಲ್ಲಾ ಪರಿಷತ್ತು ನಿಗಧಿ ಪಡಿಸಿಕೊಂಡಿರುವುದರಿಂದ 1993-94ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಶ್ರೀ ಕೆ. ಬಿ. ಕೋಳಿವಾಡ : ಸನ್ಮಾನ್ಯ ಅಧ್ಯಕ್ಷರೆ, ರಾಣಿಬೆನ್ನೂರು ನಗರದಲ್ಲಿ ಆಯುರ್ವೇದಿಕ್ ಆಸ್ಪತ್ರೆಯನ್ನು ಪ್ರಾರಂಭಿಸಬೇಕಾದಂಥ ಪ್ರಸ್ತಾವನೆ ಬಂದಿಲ್ಲವೆಂದು ಹೇಳಿದ್ದಾರೆ. ಈಗ ಪ್ರಸ್ತಾವನೆ ಬಂದರೆ ತಾವು ಮಂಜೂರು ಮಾಡುತ್ತೀರೋ ? ಮತ್ತು ಆಸ್ಪತ್ರೆಗೆ ಬೇಕಾದಂಥ ಕಟ್ಟಡಗಳು ಈಗಾಗಲೇ ಅಲ್ಲಿ ಸಾಕಷ್ಟು ಅವೈಲೆಬಲ್ ಇರುವುದರಿಂದ ಈ ವರ್ಷ ಮಂಜೂರು ಮಾಡಿಕೊಡುತ್ತೀರೋ ಹೇಗೆ?

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಮುಖ್ಯ ಮಂತ್ರಿಗಳ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆ ಬಂದರೆ, ಅದನ್ನು ಬೇಗನೆ ಮಂಜೂರು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

<u>ವಿಷಯ : ರಾಜ್ಯದಲ್ಲಿ ಅಕ್ಷಯ ಯೋಜನೆ</u>

100

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ಷಯ ಯೋಜನೆ ಯಾವಾಗ ಜಾರಿಗೆ ಬಂದಿತು?

ಆ) ಈ ಯೋಜನೆ ಜಾರಿಗೆ ಬಂದಾಗಿನಿಂದಲೂ ಪ್ರತಿ ಜಿಲ್ಲೆಗೆ ಹಣ ತಿಂಗಳು ವಿತರಣೆ ಮಾಡಲಾಗಿದೆಯೆ?

ಇ) ಕೆಲವು ಕಡೆ ಹಣದ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಒಂದು ವರ್ಷಕ್ಕೆ ಈ ಯೋಜನೆಗೆ ಎಷ್ಟು ಹಣ ಬೇಕಾಗುವುದು (ವಿವರ ನೀಡುವುದು)

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಅಕ್ಷಯ ಯೋಜನೆ ನವಂಬರ್ - 91 ರಿಂದ ಜಾರಿಗೆ ಬಂದಿತು. ಆದರೆ ಜೂನ್ - 92 ರಿಂದ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.